

**ಪತಿ– ಪತ್ನಿಯರಲ್ಲಿ ಆತ್ಮೀಯತೆ ಅನ್ಯೋನ್ಯತೆಗಳ ಕೊರತೆ ಇದ್ದಾಗ ಲೈಂಗಿಕ ಸಂಬಂಧಗಳು ಯಾಂತ್ರಿಕವಾಗುವುದು ಸಹಜ.**

## ಗಂಡಸಿನ ಸರ್ವಾಧಿಕಾರ

ಮಾನವ ಕುಲ ಉಗಮವಾದಾಗಿನಿಂದ ಕಾಮ ಪುರುಷರಿಗೆ ಮಾತ್ರ ಆನಂದ ನೀಡುವ ಕ್ರಿಯೆಯಾಗಿದ್ದು ಸ್ತ್ರೀಯರಿಗೆ ವಂಶಾಭಿವೃದ್ಧಿಯ ಉದ್ದೇಶದಿಂದ ಒಳಗೊಳ್ಳುವ ಕರ್ತವ್ಯವಾಗಿತ್ತು. ಇದಕ್ಕೆ ವೈಜ್ಞಾನಿಕ, ಸಾಮಾಜಿಕ ವಿಕಾಸವಾದದ ಕಾರಣಗಳೇನೇ ಇದ್ದರೂ ಕಾಮವನ್ನು ಆನಂದಿಸುವ ಸ್ತ್ರೀಯರನ್ನು 'ದಾರಿ ತಪ್ಪಿದವಳು' ಅಥವಾ 'ಪತಿತೆ' ಎಂಬಂತೆ ನೋಡಲಾಗುತ್ತಿತ್ತು ಎನ್ನುವುದು ಮಾತ್ರ ಸತ್ಯ. ಗಂಡಸು ತನಗೆ ಅಗತ್ಯವಿದ್ದಾಗ ಸಿಕ್ಕವರೊಡನೆ ದೇಹಸುಖವನ್ನು ಪಡೆಯುವುದು ನೈತಿಕ ಮತ್ತು ಕಾನೂನುಬದ್ಧವಾಗಿತ್ತು.

ವಿವಾಹಗಳೂ ಕೂಡ ಹುಡುಗ ಹುಡುಗಿಯರ ಇಚ್ಛೆಗಿಂತ ಹೆಚ್ಚಾಗಿ ಮನೆತನದ ಗೌರವ, ಅಂತಸ್ತು, ಆರ್ಥಿಕತೆ, ಅಧಿಕಾರ ಸ್ಥಾಪನೆ ಮುಂತಾದವುಗಳನ್ನು ಬೆಂಬಲಿಸುವ ವ್ಯವಸ್ಥೆಯಾಗಿತ್ತು. ಹಾಗಾಗಿ ಲೈಂಗಿಕತೆಗಿಂತ ಹೆಚ್ಚಾಗಿ ವಂಶಾಭಿವೃದ್ಧಿಯೇ ಮದುವೆಗಳ ಉದ್ದೇಶವಾಗಿತ್ತು. ಹಣ, ಅಂತಸ್ತು, ಅಧಿಕಾರವನ್ನು ಸ್ಥಾಪಿಸುವ, ಬೆಳೆಸುವ, ಉಳಿಸಿಕೊಳ್ಳುವ ಸಾಧನವಾಗಿದ್ದ ಸ್ತ್ರೀ, ಪುರುಷನ ಆಸ್ತಿಯಂತೆ ಮಾತ್ರ ಬಳಕೆಯಾಗುತ್ತಿದ್ದಳು. ಕನ್ಯತ್ವ, ಪಾತಿವ್ರತ್ಯ, ವೈಧವ್ಯಗಳಂತಹ ಚಿಂತನೆಗಳನ್ನು ವೈಭವೀಕರಿಸುವುದು ಸ್ತ್ರೀಯರನ್ನು ಹಿಡಿತದಲ್ಲಿಡುವ ಒಂದು ಉಪಾಯವಾಗಿತ್ತಷ್ಟೇ. ಅತ್ಯಾಚಾರಕ್ಕೊಳಗಾದ ಮಹಿಳೆಗೇ ಶಿಕ್ಷೆ ನೀಡುವ ಕಾನೂನು ಇವತ್ತಿಗೂ ಹಲವಾರು ದೇಶಗಳಲ್ಲಿ ಜಾರಿಯಲ್ಲಿವೆ ಎಂದರೆ ಲೈಂಗಿಕತೆಯ ಮೇಲೆ ಪುರುಷರ ಹಿಡಿತವನ್ನು ಕಲ್ಪಿಸಿಕೊಳ್ಳಿ.

ಸ್ತ್ರೀಯರನ್ನು ಗಂಡಸಿನ ಆಸ್ತಿಯಂತೆ ಬಳಸುವುದು ಯಾವುದೇ ದೇಶ, ಧರ್ಮ ಅಥವಾ ಪಂಗಡಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಹಾಗಾಗಿ ಮೇಲಿನ ಮಾತುಗಳು ಯಾವುದೇ ಧರ್ಮವನ್ನೋ, ಪಂಗಡವನ್ನೋ, ದೇಶವನ್ನೋ ಗುರಿಯಾಗಿಟ್ಟುಕೊಂಡು ಹೇಳಿರುವುದಲ್ಲ.

ಆದರೆ ಕಳೆದ ಸುಮಾರು ಇನ್ನೂರು ವರ್ಷಗಳಿಂದ ಆಗುತ್ತಿರುವ ಬದಲಾವಣೆಗಳು ಸ್ತ್ರೀಯರ ಲೈಂಗಿಕತೆಗೆ ಹೊಸ ಗುರುತನ್ನು ನೀಡಿದವು. ಸ್ತ್ರೀವಾದದ ಉಗಮ, ಗರ್ಭನಿರೋಧಕಗಳ ಆವಿಷ್ಕಾರ, ಕಾನೂನುಬದ್ಧವಾದ ಗರ್ಭಪಾತ, ಮಹಿಳೆಯರ ವಿದ್ಯಾಭ್ಯಾಸ ಮತ್ತು ಆರ್ಥಿಕ ಸ್ವಾತಂತ್ರ, ಪ್ರಜಾಪ್ರಭುತ್ವಗಳಲ್ಲಿ ಸಮಾನ ಹಕ್ಕು ನೀಡುವ ಕಾನೂನುಗಳುಮುಂತಾದವು ಪುರಷರ ಪ್ರಾಬಲ್ಯವನ್ನು ತಗ್ಗಿಸುತ್ತಾ ಬಂದಿವೆ. ಸಾಕಷ್ಟು ದೇಶಗಳಲ್ಲಿ ಸಂಗಾತಿಯನ್ನು ಆಯ್ದುಕೊಳ್ಳುವ,  ತ್ಯಜಿಸುವ, ಬದಲಾಯಿಸುವ ಸ್ವಾತಂತ್ರ್ಯವನ್ನು ಯುವಜನತೆ ಪಡೆದುಕೊಂಡಿತು. ಹಾಗಾಗಿ ಮದುವೆಯ ಉದ್ದೇಶ ಸ್ನೇಹ, ಭದ್ರತೆ, ಸಾಂಗತ್ಯ, ಲೈಂಗಿಕ ತೃಪ್ತಿಗಳಾಗಿ ರೂಪಾಂತರಗೊಳ್ಳತೊಡಗಿತು. ಇಷ್ಟೆಲ್ಲಾ ಬದಲಾವಣೆಗಳಾದ ಮೇಲೂ ಪ್ರಪಂಚದ ಹೆಚ್ಚಿನ ಸ್ತ್ರೀಯರು ಇವತ್ತಿಗೂ ಲೈಂಗಿಕತೆಯಲ್ಲಿ ಪುರುಷನಿಗೆ ಅಡಿಯಾಳಾಗಿರುವುದರಲ್ಲೇ ತೃಪ್ತಿ ಪಡೆಯುತ್ತಿದ್ದಾರೆ ಎಂದರೆ ಪುರುಷ ಪ್ರಾಬಲ್ಯದ ಬೇರುಗಳು ಎಷ್ಟು ಆಳವಾಗಿರಬಹುದು ಎಂದು ಯೋಚಿಸಬೇಕು.

## ಮುಕ್ತಕಾಮವಲ್ಲ, ಮುಕ್ತ ದಾಂಪತ್ಯ

ಮೇಲೆ ಹೇಳಿರುವುದು ಹಲವರಿಗೆ ಮುಕ್ತಕಾಮವನ್ನು ಪ್ರತಿಪಾದಿಸುವುದಕ್ಕೆ ಮುನ್ನುಡಿಯಾಗಿ ಕಾಣುತ್ತಿರಬೇಕಲ್ಲವೇ! ಮುಕ್ತಕಾಮ ಧಾರ್ಮಿಕ ಸಾಮಾಜಿಕ ಕಟ್ಟುಪಾಡುಗಳಿಲ್ಲದಿದ್ದಲ್ಲಿ ಮಾನವನ ವ್ಯಕ್ತಪಡಿಸಲಾಗದ ಮನದಾಳದ ಬಯಕೆ ಎನ್ನುವುದನ್ನು ನಾವು ಮರೆಮಾಚಬೇಕಾಗಿಲ್ಲ. ಆದರೆ ಮುಕ್ತಕಾಮವನ್ನು ಬೆಂಬಲಿಸುವುದು ಇಲ್ಲಿನ ಉದ್ದೇಶವಲ್ಲ. ಒಂದೇ ಸಂಗಾತಿಯೊಡನೆ ದೀರ್ಘಕಾಲದವರೆಗೆ ಕಾಮವನ್ನು ಮುಕ್ತವಾಗಿ ಅನುಭವಿಸುವುದು ಹೇಗೆ ಎನ್ನುವುದು ಮಾತ್ರ ಇಲ್ಲಿನ ವಿಷಯ.

ಮುಕ್ತಕಾಮ ಹಲವಾರು ಸಣ್ಣಗುಂಪುಗಳಲ್ಲಿ ಜಾರಿಯಲ್ಲಿದ್ದರೂ ಯಾವುದೇ ಒಂದು ದೇಶ ಅಥವಾ ಸಮಾಜ ಅದಕ್ಕೆ ಮನ್ನಣೆ ನೀಡಿರಲಿಲ್ಲ. ಇಂದೂ ಕೂಡ ಪಾಶ್ಚಿಮಾತ್ಯ ದೇಶಗಳಲ್ಲಿ ವಿವಾಹಪೂರ್ವದ ಲೈಂಗಿಕತೆ ಕಳಂಕವಲ್ಲದಿದ್ದರೂ ಒಂದೇ ಸಂಗಾತಿಯೊಡನೆ ಬದುಕುವುದಕ್ಕೆ ಒತ್ತು ನೀಡಲಾಗುತ್ತದೆ. ಹೆಚ್ಚುತ್ತಿರುವ ವಿಚ್ಛೇದನಗಳನ್ನು ನಿಯಂತ್ರಣದಲ್ಲಿಡಲು ಮನಃಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳು ಪ್ರಯತ್ನ ಪಡುತ್ತಿದ್ದಾರೆ. ಸಾಕಷ್ಟು ಜನ ಲೈಂಗಿಕ ಚಿಕಿತ್ಸಕರು ಒಂದೇ ಸಂಗಾತಿಯೊಡನೆ ಜೀವನಪರ್ಯಂತ ಲೈಂಗಿಕ ಆಸಕ್ತಿಯನ್ನು ಉಳಿಸಿಕೊಂಡು ಸುಖವಾಗಿ ಬಾಳುವುದರ ಬಗೆಗೆ ಸಂಶೋಧನೆಗಳನ್ನು ಮಾಡಿ ತಮ್ಮ ವಾದಗಳನ್ನು ಮಂಡಿಸಿದ್ದಾರೆ. ದಾಂಪತ್ಯ ಮತ್ತು ಲೈಂಗಿಕ ಮನೋಚಿಕಿತ್ಸೆ ಇವತ್ತು ಹೆಚ್ಚು ಪ್ರಚಲಿತವಾಗುತ್ತಿದೆ. ಅವುಗಳಿಂದ ಹೆಕ್ಕಿತೆಗೆದ ನಮ್ಮ ಸಾಮಾಜಿಕ ಸ್ಥಿತಿಗತಿಗಳಿಗೆ ಹೊಂದುವಂತಹ ಹಲವಾರು ಅಂಶಗಳನ್ನು ಇಲ್ಲಿ ತಿಳಿದುಕೊಳ್ಳೋಣ. ದಾಂಪತ್ಯದ ಲೈಂಗಿಕತೆಯ ಬಗೆಗೆ ಇದು ಸಮಗ್ರವಾದ ಅಥವಾ ಅಂತಿಮವಾದ ಬರಹವೇನೂ ಅಲ್ಲ. ಇದರ ಬಗೆಗೆ ಸಾವಿರಾರು ಪುಸ್ತಕಗಳು ಬಂದಿರುವಾಗ ಎಲ್ಲಾ ಅಂಶಗಳನ್ನೂ ಸಂಕ್ಷಿಪ್ತವಾಗಿ ಹೇಳುವುದು ಸಾಧ್ಯವಿಲ್ಲ.

ಪತಿ ಪತ್ನಿಯರಲ್ಲಿ ಆತ್ಮೀಯತೆ ಅನ್ಯೋನ್ಯತೆಗಳ ಕೊರತೆ ಇದ್ದಾಗ ಲೈಂಗಿಕ ಸಂಬಂಧಗಳು ಯಾಂತ್ರಿಕವಾಗುವುದು ಸಹಜ. ಪತಿ– ಪತ್ನಿಯರ ಬಾಂಧವ್ಯ ಸೌಹಾರ್ದಯುತವಾಗಿದ್ದಾಗಲೂ ಕಾಮ ಮುಕ್ತವಾಗುವುದರ ಬಗೆಗೆ ಮಾತ್ರ ಇಲ್ಲಿ ಚರ್ಚಿಸೋಣ.